

## ಮಾನವ ಜೀವನದಲ್ಲಿ ಮೌಲ್ಯಗಳು ಏಕೆ ಬೇಕು?

❑ ವಿಜಯಾ ಚಂದ್ರಮೌಳೀಶ್ವರ

**ವೈಯಕ್ತಿಕ ಹಾಗೂ ಸಾಮಾಜಿಕ ಬದುಕಿನಲ್ಲಿ ಮೌಲ್ಯಗಳ ಮಹತ್ವವನ್ನು ತಿಳಿಸಿಕೊಟ್ಟಿರುವ ವಿಜಯಾ ಚಂದ್ರಮೌಳೀಶ್ವರ ಅವರು 'ಮಂಜು ಮುಸುಕಿದ ಸಂಜೆ' (ಕಾದಂಬರಿ) 'ನಂದಾದೀಪ' (ಕವನ ಸಂಕಲನ) ಮುಂತಾದ ಗ್ರಂಥಗಳನ್ನು ರಚಿಸಿರುವರು ಹಾಗೂ ಅತ್ತಿಮಬ್ಬೆ ಮತ್ತು ಗೊರೂರು ಸಾಹಿತ್ಯ ಪ್ರಶಸ್ತಿಗಳನ್ನು ಪಡೆದಿದ್ದಾರೆ.**

ಅಂದವಾದ ಮುತ್ತಿನ ಮಣಿಗಳನ್ನು ಜೋಡಿಸಿದ ಹಾರ ಸಹಜವಾಗಿ ಸುಂದರವಾಗಿರುವಂತೆ, ಉದಾತ್ತ ಧ್ಯೇಯ, ಉತ್ತಮ ಮೌಲ್ಯಗಳನ್ನೊಳಗೊಂಡ ಮಾನವ ಜೀವನ ಸ್ವಾಭಾವಿಕವಾಗಿ ಶ್ರೇಷ್ಠವಾಗಿರುತ್ತದೆ. ಕಾಲಗತಿಯಲ್ಲಿ, ಹುಟ್ಟಿನಿಂದ ಸಾವಿನೆಡೆಗೆ, ಬಾಳ ಪಥದಲ್ಲಿ ನಡೆಯುವುದೇ ಬದುಕು. ಈ ಬದುಕು ಕೇವಲ ಬದುಕಾಗಿ ಉಳಿಯದೆ ಸೊಬಗಿನ ಬೀಡಾಗ ಬೇಕಾದರೆ ಉನ್ನತ ಮೌಲ್ಯಗಳ ಪಡಿಯಚ್ಚಿನಲ್ಲಿ ಅದನ್ನು ಹಾಕಬೇಕು. ಬಾಳಪಥದಲ್ಲಿ ನಡೆಯುವಾಗ ಮಾನವನು ಅಳವಡಿಸಿಕೊಳ್ಳಬೇಕಾದ ನೈತಿಕ ಶಿಸ್ತನ್ನೇ ಮೌಲ್ಯಗಳೆಂದು ಕರೆಯುವುದು. ಈ ಮೌಲ್ಯಗಳ ಉಗಮವಾದರೂ ಎಲ್ಲಿ? ಅವುಗಳ ಪ್ರಭಾವವಾದರೂ ಎಂತಹುದು? ಇತ್ಯಾದಿ ಪ್ರಶ್ನೆಗಳಿಗೆ ಉತ್ತರಿಸುವುದಾದರೆ, ಹೀಗೆ ಹೇಳಬಹುದು : "ಮೌಲ್ಯಗಳು ಮನುಜನ ಅಂತರಾತ್ಮನ ಪ್ರೇರಣೆಗಳು. ಈ ಮೌಲ್ಯಗಳನ್ನೊಳಗೊಂಡ ವ್ಯಕ್ತಿ ಹಾಗೂ ಸಮಾಜ ಜೀವನ ಶಾಂತಿಸೌಖ್ಯದಿಂದ ಕೂಡಿರುತ್ತದೆ." ಮಾನವೀಯ ಮೌಲ್ಯಗಳಿಗೂ ಧರ್ಮಶ್ರದ್ಧೆಗೂ ನಿಕಟ ಸಂಬಂಧವಿರುವುದಾದರೂ, ಈ ಮೌಲ್ಯಗಳು ಎಲ್ಲ ವಿಶಿಷ್ಟ ಮತ ಧರ್ಮಗಳಿಗೂ ಮೀರಿದ ಸಾಮಾನ್ಯ ಮಾನವ ಧರ್ಮದ ಪರಿಧಿಯಲ್ಲಿ ಬರುತ್ತವೆ.

> ಯಶಸ್ವೀ ವ್ಯಕ್ತಿಯಾಗಿರುವುದಕ್ಕಿಂತ ಮೌಲ್ಯವಂತ ವ್ಯಕ್ತಿಯಾಗಿರುವುದಕ್ಕೆ ಪ್ರಯತ್ನಿಸಿ.
>
> —ಆಲ್ಬರ್ಟ್ ಐನ್‌ಸ್ಟೈನ್

ವೈಜ್ಞಾನಿಕ ಯುಗದಲ್ಲಿ, ಬುದ್ಧಿಜೀವಿಗಳೆಂದು ತಮ್ಮನ್ನು ಕರೆದುಕೊಳ್ಳುವ ಅನೇಕ ಮಂದಿ ನಮ್ಮೆಲ್ಲರಿಗೂ ಮೇಲೊಂದು 'ದೇವರು' ಎಂಬ ಅಗೋಚರ ಶಕ್ತಿ ಇದೆ ಎಂಬ ಮಾತನ್ನು ಅಲ್ಲಗಳೆಯುತ್ತಾರೆ. ಆದರೆ ತಮ್ಮೊಳಗೆ ಒಬ್ಬ ಅಂತರಾತ್ಮ ಅಥವಾ ಒಂದು ಅಂತಃಪ್ರಜ್ಞೆ (conscience) ಇಲ್ಲವೆಂದು ಹೇಳುವ ಸಾಹಸ ಮಾಡಲಾರರು. ಅಂತರಾತ್ಮ ಅಥವಾ ಅಂತಃಪ್ರಜ್ಞೆ ಪ್ರಾಣಿ ಜಗತ್ತಿನಲ್ಲಿ ಮಾನವನಿಗೆ ಮಾತ್ರ ಪ್ರಕೃತಿ ಕೊಟ್ಟಿರುವ ವಿಶೇಷ ಕೊಡುಗೆ. ಈ ಅಂತಃಪ್ರಜ್ಞೆ ಸಮಯ ಸಮಯಕ್ಕೆ ಮಾನವನಿಗೆ ಮಾರ್ಗದರ್ಶನ ಮಾಡಿ, ಅವನ ಮನೋನೆಮ್ಮದಿಗೆ ಅತೀ ಆವಶ್ಯಕವಾದ ಜೀವನಕ್ರಮಗಳ ಕಡೆ ಬೊಟ್ಟು ಮಾಡಿ ತೋರಿಸುತ್ತದೆ. ಆದರೆ ಬಾಳಿನ ಗೊಂದಲದ ಕೆಸರಿನಲ್ಲಿ ಸಿಕ್ಕಿದ ಮನುಷ್ಯನಿಗೆ ಅನೇಕವೇಳೆ ಅಂತರಾತ್ಮನ ಈ ನಿರ್ದೇಶನವಾಗಲೀ ಕೂಗಾಗಲೀ ಗಮನಕ್ಕೆ ಬರುವುದೇ ಇಲ್ಲ! ಈ ಕೂಗನ್ನು ಕೇಳದ ಮನುಷ್ಯ, ದಿನದಿನಕ್ಕೆ ದುರ್ಬಲನಾಗುತ್ತಾ ಮನಸ್ಸಿನ ನೆಮ್ಮದಿ ಶಾಂತಿಗಳನ್ನು ಕಳೆದುಕೊಳ್ಳುತ್ತಾನೆ.

ಸನಾತನ ಋಷಿ ಮುನಿಗಳೂ ವಿವಿಧ ಮತ ಹಾಗೂ ಧರ್ಮ ಗುರುಗಳೂ ದಾರ್ಶನಿಕರೂ ಶ್ರೇಷ್ಠಪುರುಷರೂ ತಮ್ಮ ಅನುಭವದ ಆಧಾರದ ಮೇಲೆ ಮಾನವಜೀವನವನ್ನು ವಿವಿಧ ಕೋನಗಳಿಂದ ನಿರುಕಿಸಿ, ತಮ್ಮ ಜ್ಞಾನದ ಬೆಳಕಿನಲ್ಲಿ ಅದರ ಒಂದೊಂದು ಅಂಶವನ್ನೂ ವಿಶ್ಲೇಷಿಸಿ, ಮಾನವ ಜೀವನದ ಶಾಂತಿ ನೆಮ್ಮದಿಗೆ ಆವಶ್ಯಕವಾದ ನೀತಿಗಳನ್ನು ಕಂಡುಹಿಡಿದರು. ಅವುಗಳನ್ನು ತಮ್ಮ ಬುದ್ಧಿಯ ಒರೆಗಲ್ಲಿಗೆ ಹಚ್ಚಿ ದೃಢಪಡಿಸಿಕೊಂಡು ಮಾನವ ಜನಾಂಗದ ಮುಂದೆ ಇಟ್ಟಿದ್ದಾರೆ. ಅವರ ಈ ನೈತಿಕ ಸಿದ್ಧಾಂತಗಳು ಭೌತಿಕ ಪ್ರಪಂಚದ ವಿಜ್ಞಾನಿಗಳು ತಮ್ಮ ಸತತ ಪ್ರಯೋಗಗಳಿಂದ ಕಂಡುಕೊಂಡ ವೈಜ್ಞಾನಿಕ ಸಿದ್ಧಾಂತಗಳಷ್ಟೇ ಸತ್ಯ. ಇವು ಎಲ್ಲ ದೇಶ ಕಾಲ ಜನಾಂಗಗಳಿಗೂ ಅನ್ವಯವಾಗುವ ನಿಖರ ಪ್ರತಿಪಾದನೆಗಳಾಗಿವೆ ಮತ್ತು ಮಾನವ ಲೋಕದ ಕಲ್ಯಾಣಕ್ಕೆ ಅಡಿಗಲ್ಲಾಗಿವೆ. ಹಾಗಾಗಿ ಶಾಂತಿ, ನೆಮ್ಮದಿಯನ್ನು ಬಯಸುವ ಪ್ರತಿಯೊಬ್ಬ ವ್ಯಕ್ತಿ ಹಾಗೂ ಸಮಾಜಗಳು ಎಲ್ಲರ ಅಂತರಾತ್ಮ ಒಪ್ಪುವ ಈ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಅಗತ್ಯವಷ್ಟೇ ಅಲ್ಲ, ಅನಿವಾರ್ಯವೂ ಆಗುತ್ತದೆ.

ಮಾನವ ಜೀವನದ ಎಲ್ಲ ವ್ಯಥೆಗಳಿಗೂ, ಅವನ ಹೃದಯದಲ್ಲಿ ಅಡಗಿರುವ ಕಾಮ, ಕ್ರೋಧ, ಲೋಭ ಮೋಹ ಮದ ಮಾತ್ಸರ್ಯಗಳು ಕಾರಣವೆಂದು ಎಲ್ಲರ ಸಾಮಾನ್ಯ ಅನುಭವದ ವಿಷಯವಾದರೂ, ಅವುಗಳನ್ನು ಹತ್ತಿಕ್ಕಲು ಸಮರ್ಥವಾದ ಅಸ್ತ್ರಗಳೆಂದರೆ ಜೀವನದ ಮೌಲ್ಯಗಳು ಎಂಬ ಅರಿವು ಇರುವುದು ಕೆಲವರಿಗೆ ಮಾತ್ರ! ಈ ಮೌಲ್ಯಗಳಾದರೂ ಯಾವುವು? ಮೌಲ್ಯಗಳಲ್ಲಿ ಕೆಲವನ್ನು ಉದಹರಿಸಬೇಕೆಂದರೆ, ಅಹಿಂಸೆ, ಸತ್ಯ, ನ್ಯಾಯ, ಉದಾರತೆ, ಸೇವಾ ಮನೋಭಾವ, ದಯೆ ಇತ್ಯಾದಿಗಳನ್ನು ಹೆಸರಿಸಬಹುದು. ನೀತಿಯ ಚೌಕಟ್ಟಿನಲ್ಲಿ ಬರುವ ಈ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡ ಪ್ರತಿಯೊಬ್ಬ ಮನುಷ್ಯನ ದೇಹ ಹಾಗೂ ಮನಸ್ಸು ಎರಡೂ ಶುಚಿಯಾಗಿರುತ್ತವೆ, ಆನಂದ ನೆಮ್ಮದಿ ಪಡೆಯುತ್ತವೆ.

ಶುಭ್ರವಾದ, ಸ್ವಚ್ಛವಾದ ವಸ್ತ್ರಗಳನ್ನು ಧರಿಸಿದಾತ, ತನ್ನ ಸುತ್ತಲಿನವರ ಗಮನ ಸೆಳೆದು, ಅವರ ಗೌರವ ಮನ್ನಣೆಗಳಿಗೆ ಪಾತ್ರನಾಗುವಂತೆ, ಜೀವನದಲ್ಲಿ ಮೌಲ್ಯಗಳನ್ನು ಹೊಂದಿರುವಾತ ತನ್ನ ಸಹಜೀವಿಗಳ ಪ್ರಶಂಸೆಗೆ ಮೆಚ್ಚುಗೆಗೆ ಪಾತ್ರನಾಗಿ, ಅವರ ಮೇಲೆ ತನ್ನ ಪ್ರಭಾವ ಬೀರುತ್ತಾನೆ. ಅಷ್ಟೇ ಅಲ್ಲ, ಸ್ವತಃ ಆತ್ಮಗೌರವ, ಆತ್ಮವಿಶ್ವಾಸಗಳನ್ನು ಬೆಳೆಸಿಕೊಂಡಿರುವ ಅವನು ಆಂತರಿಕ ಸೌಂದರ್ಯದಿಂದ ಮೆರೆಯುತ್ತಾನೆ. ಹೀಗೆ ಬಾಹ್ಯ ಆಂತರಿಕ ಎರಡೂ ನಿಟ್ಟಿನಲ್ಲಿ ತೃಪ್ತಿಪಡೆದ ಅವನ ಬಾಳು ಸಾರ್ಥಕವಾಗುತ್ತದೆ. ಇಂತಹ ವ್ಯಕ್ತಿಗಳನ್ನೊಳಗೊಂಡ ಸಮಾಜ ಅಥವಾ ಸಮುದಾಯದಲ್ಲಿ ಸೌಜನ್ಯ ಸಹೃದಯತೆಗಳು ನೆಲಸಿ ಸಂತೃಪ್ತಿಯ ವಾತಾವರಣ ಉಂಟಾಗುತ್ತದೆ.

> ಈ ಜಗತ್ತಿನಲ್ಲಿ ಅತ್ಯಂತ ಸ್ವಾಭಾವಿಕ ಸೌಂದರ್ಯವೆಂದರೆ ಪ್ರಾಮಾಣಿಕತೆ ಮತ್ತು ನೈತಿಕ ಸತ್ಯ, ಏಕೆಂದರೆ ಎಲ್ಲ ಸೌಂದರ್ಯವೂ ಸತ್ಯ. —ಷಾಫ್ಟ್ಸ್‌ಬರಿ (Shaftesbury)

ಭಗವದ್ಗೀತೆಯಲ್ಲಿ ಒಂದು ಕಡೆ "ಇದಂ ಶರೀರಂ ಕೌಂತೇಯ ಕ್ಷೇತ್ರಮಿತ್ಯಭಿಧೀಯತೇ । ಏತದ್ಯೋ ವೇತ್ತಿ ತಂ ಪ್ರಾಹುಃ ಕ್ಷೇತ್ರಜ್ಞ ಇತಿ ತದ್ವಿದಃ ॥ ಎಂಬ ಉಲ್ಲೇಖ ಬರುತ್ತದೆ. ಇಲ್ಲಿ ಮಾನವ ಶರೀರವನ್ನು ಭೂಮಿಗೆ ಹೋಲಿಸಲಾಗಿದೆ. ಭೂಮಿಯಂತೆಯೇ ಪಂಚಭೂತಗಳಿಂದ ನಿರ್ಮಿತವಾದುದು ಈ ದೇಹ. ಅವುಗಳಲ್ಲಿ ವ್ಯತ್ಯಯವಾದಾಗ, ಭೂಮಿ ಸವಕಲಾಗುವಂತೆ, ದೇಹವೂ ತನ್ನ ಆರೋಗ್ಯ ಕಳೆದುಕೊಂಡು ದುರ್ಬಲವಾಗುತ್ತದೆ. ಭೂಮಿಯಲ್ಲಿ ನೆಟ್ಟ ಬೀಜಗಳು ಒಳಗಿರುವಂತೆ ಮಾನವನ ಸಂಸ್ಕಾರಗಳು ಸೂಕ್ಷ್ಮರೂಪದಲ್ಲಿ ಅವನ ಅಂತರಂಗದಲ್ಲಿರುತ್ತವೆ. ಕಳೆ ಕಿತ್ತು, ಭೂಮಿಯನ್ನು ಉತ್ತು ಬಿತ್ತು ನೀರೆರೆದು ಪೋಷಿಸಿದಾಗ ಬೀಜಗಳು ಮೊಳಕೆಯೊಡೆದು ಫಲ ಕೊಡುವಂತೆ, ದೇಹವನ್ನು ಆರೋಗ್ಯವಾಗಿ ಕಾದಿರಿಸಿಕೊಂಡು, ದೂಷಿತ ಮಾರ್ಗಗಳನ್ನು ತ್ಯಜಿಸಿ, ಸನ್ಮಾರ್ಗದಲ್ಲಿ ಕೊಂಡೊಯ್ಯುವ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಅವನ ಒಳಗಿನ ಸಂಸ್ಕಾರಗಳಿಗೆ ಪೋಷಣೆಯಾಗಿ ಅವು ಮೊಳಕೆಯೊಡೆದು ಭವಿಷ್ಯದಲ್ಲಿ ಉತ್ತಮವಾದ ಐಹಿಕ ಹಾಗೂ ಪಾರಮಾರ್ಥಿಕ ಫಲಗಳನ್ನು ಕೊಡುತ್ತವೆ. ಹೀಗಾಗಿ ಒಳಿತು ಕೆಡಕುಗಳನ್ನು ವಿಂಗಡಿಸಬಲ್ಲ ಮಾನವನ ಹುಟ್ಟು ಸಂಸ್ಕಾರಗಳನ್ನು ಪೋಷಿಸಿ ಬೆಳೆಸುವ ಜೀವಜಲದ ಸ್ರೋತಗಳು ಈ ಮೌಲ್ಯಗಳು ಎಂದರೆ ತಪ್ಪಾಗಲಾರದು. ಕೆಲವು ಸಾಕ್ಷೀಭೂತ ಉದಾಹರಣೆಗಳಿಂದ ಈ ಮಾತನ್ನು ಪ್ರಮಾಣೀಕರಿಸಬಹುದು.

ಹಿಂಸೆಯು ಹಿಂಸೆ ಮಾಡುವವನಿಗೇ ಆಗಲಿ, ಹಿಂಸೆಗೆ ಒಳಗಾದವನಿಗೇ ಆಗಲಿ, ಹಿತ ತರುವುದಿಲ್ಲ. ಹಿಂಸೆಗೆ ಒಳಗಾದವನು ತನಗಾದ ನೋವು ಸಂಕಟಗಳಿಂದ ನರಳುತ್ತಾ, ತನ್ನನ್ನು ಹಿಂಸಿಸಿದವನ ಮೇಲೆ ದ್ವೇಷ ತಾಳಿ ಪ್ರತೀಕಾರದ ವೇಳೆ ನಿರೀಕ್ಷೆ ಮಾಡುತ್ತಾ ಹಳಹಳಿಸುವುದು ಸರ್ವೇ ಸಾಮಾನ್ಯ. ಹಾಗೆಯೇ ಹಿಂಸೆ ಮಾಡಿದವನು ಹೊರಗೆ ತನ್ನ ಕ್ರೌರ್ಯದಿಂದ ತಾನು ಹಿಂಸಿಸುವವರನ್ನು ಮೆಟ್ಟಿದ್ದೇನೆಂದು ಮೆರೆಯುತ್ತಿದ್ದರೂ, ಆಂತರ್ಯದಲ್ಲಿ ಅವನಿಗೆ ತನ್ನ ಕೃತಿ ಎದುರಿನವನ ದ್ವೇಷ ತಿರಸ್ಕಾರಗಳನ್ನು ಬೆಳಸಿ ಅವನಿಂದ ಭವಿಷ್ಯದಲ್ಲಿ ತನಗೆ ಅಪಾಯ, ಪ್ರತಿಹಿಂಸೆಗಳು ಸಂಭವಿಸಬಹುದೇನೋ ಎಂಬ ಆತಂಕದಿಂದ ಕಳವಳ ಪಡಲಾರಂಭಿಸುತ್ತಾನೆ. ಜೊತೆಗೆ ಅವನ ಅಂತಃಪ್ರಜ್ಞೆಯೂ ಅವನ ಕೃತಿಯನ್ನು ಹಳಿದು ಅವನ ಮನದ ಶಾಂತಿಯನ್ನು ಕದಡುತ್ತಲೇ ಇರುತ್ತದೆ. ಇದನ್ನೆಲ್ಲಾ ಪರಿಶೀಲಿಸಿಯೇ ನಮ್ಮ ಧರ್ಮಗ್ರಂಥಗಳು "ಅಹಿಂಸೆಯೇ ಪರಮ ಧರ್ಮ" ಎಂದು ಸಾರಿರುವುದು! ಮಹಾತ್ಮ ಯೇಸುಕ್ರಿಸ್ತನು ಈ ವಿಷವರ್ತುಲವನ್ನು ತಪ್ಪಿಸಲೆಂದೇ "ನಿಮ್ಮ ಒಂದು ಕೆನ್ನೆಗೆ ಹೊಡೆದವನಿಗೆ, ಇನ್ನೊಂದು ಕೆನ್ನೆ ತೋರಿಸಿ" ಎಂದು ತಾಳ್ಮೆಯ ಪಾಠ ಹೇಳಿದ್ದು!

ಒಬ್ಬ ಶ್ರೀಮಂತ ತನ್ನ ಮುಂದಿರುವ ತಟ್ಟೆಯಲ್ಲಿ ಬಡಿಸಿದ ಷಡ್ರಸೋಪೇತ ಮೃಷ್ಟಾನ್ನವನ್ನು ನೋಡಿ ಆನಂದದಿಂದ ಅದರ ಸವಿಯ ಕಲ್ಪನೆಯ ಕನಸಿನಲ್ಲಿದ್ದಾನೆಂದಿಟ್ಟುಕೊಳ್ಳೋಣ. ಅದೇ ಸಮಯದಲ್ಲಿ ಹಸಿವಿನಿಂದ ಕಂಗಾಲಾಗಿರುವ ಜೀವಿಗಳು ಅವನ ಮುಂದೆ ನಿಂತು, ಅವನ ತಟ್ಟೆಯಲ್ಲಿರುವ ಆಹಾರವನ್ನು ಆಸೆಗಣ್ಣುಗಳಿಂದ ನೋಡತೊಡಗಿದರೆ, ಅವನು ನಿರಾತಂಕವಾಗಿ ಭೋಜನ ಮಾಡಲು ಸಾಧ್ಯವೇನು? ಒಂದು ವೇಳೆ ಅವರನ್ನೆಲ್ಲಾ ಬಲವಂತವಾಗಿ ಹೊರಗೆ ಕಳಿಸಿ ಭೋಜನಕ್ಕೆ ಕುಳಿತರೆ ಅವನಿಗೆ ಮೊದಲ ನೆಮ್ಮದಿ ಉಳಿಯುವುದೇನು? ಅವನು ನೆಮ್ಮದಿ ಕಾಣಬೇಕಾದರೆ, ತನ್ನ ಹಸಿವಿನ ಅನುಭವದಿಂದ ಅವರ ನೋವನ್ನು ತಿಳಿದು, ಅವರೆಲ್ಲರಿಗೂ ಭೋಜನದ ವ್ಯವಸ್ಥೆ ಮಾಡಲೇಬೇಕು. ಒಂದು ವೇಳೆ ಅವನು ತನ್ನ ಸುತ್ತಲಿನ ವಾತಾವರಣಕ್ಕೆ ಸ್ಪಂದಿಸದಿದ್ದರೆ, ಮುಂದೆ ಅನಾಹುತಗಳು ಧಾವಿಸಿ ಬರುವುದು ನಿಶ್ಚಯ!

ಇನ್ನು ನ್ಯಾಯ ನೀತಿಗಳ ಬಗ್ಗೆ ಹೇಳುವುದಾದರೆ, ತಿಳಿದೂ ತಿಳಿದೂ ಯಾವುದೇ ಅನಿವಾರ್ಯತೆಯಿಂದಲೇ ಆಗಲಿ ಅಸತ್ಯ ಅನ್ಯಾಯಗಳನ್ನು ಪೋಷಿಸಿ ಬೆಂಬಲಿಸುವವರಿಗೆ, ಅಂತ್ಯದಲ್ಲಿ ನೋವು, ಸಂಕಟ ತಪ್ಪಿದ್ದಲ್ಲ. ಮಹಾಭಾರತದ ಭೀಷ್ಮ ಕೃಪ ದ್ರೋಣ ಅಶ್ವತ್ಥಾಮರಂತಹ ಮಹಾಪುರುಷರು ಮನಸ್ಸಿನಿಂದ

ಸಜ್ಜನರೂ, ಧರ್ಮವಂತರೂ ಆದ ಪಾಂಡವರ ಪಕ್ಷಪಾತಿಗಳಾದರೂ ಅನಿವಾರ್ಯತೆಯಿಂದ ದುರ್ಯೋಧನನಿಗೆ ಅಧೀನರಾಗಿ ತಮ್ಮ ದೇಹಗಳನ್ನು ಅವನ ಸೇವೆಯಲ್ಲಿ ಮುಡಿಪಾಗಿಟ್ಟು, ಪಾಂಡವರಿಗೆ ವಿರುದ್ಧವಾಗಿ ಹೋರಾಡಿದರು. ಅಂತ್ಯದಲ್ಲಿ ಅವರು ಶರಣಾದದ್ದು ಮೊದಲು ಸೋಲಿಗೆ, ನಂತರ ಸಾವಿಗೆ. ಆದರೆ ಯಾರ ಅಥವಾ ಯಾವ ದಾಕ್ಷಿಣ್ಯಕ್ಕೂ ಒಳಗಾಗದೆ ಧರ್ಮವಂತರನ್ನು ಬೆಂಬಲಿಸಿ ಪ್ರೋತ್ಸಾಹಿಸಿದ ಶ್ರೀಕೃಷ್ಣ ಎಲ್ಲರ ಮನ್ನಣೆ ಗೌರವಗಳಿಗೆ ಪಾತ್ರನಾಗಿ ಧರ್ಮವನ್ನು ಲೋಕದಲ್ಲಿ ಪ್ರತಿಷ್ಠಾಪಿಸಿದ!

ಸುಳ್ಳು ಹೇಳುವ ಯಾವ ಮನುಷ್ಯನಿಗೂ ಇತರರಿಂದಾಗಲೀ ಅಥವಾ ತನ್ನ ಅಂತರಾತ್ಮನಿಂದಲೇ ಆಗಲಿ ಎಂದೂ ಗೌರವ ದೊರೆಯುವುದಿಲ್ಲ. ನಿಸ್ವಾರ್ಥದಿಂದ ಅಪ್ರಿಯ ಸತ್ಯ ನುಡಿಯಬಾರದೆಂದು ಅದನ್ನು ಮರೆಮಾಚುವ ವಿಷಯ ಬೇರೆ. ಆದರೆ ಸ್ವಾರ್ಥದಿಂದ ಸುಳ್ಳು ಹೇಳುತ್ತಾ ತಾತ್ಕಾಲಿಕವಾಗಿ ತಮಗೆ ದೊರೆತ ಸಫಲತೆಯಿಂದ ಮತ್ತೂ ಹುರಿದುಂಬಿ ಸುಳ್ಳನ್ನೇ ಜೀವನ ಕ್ರಮ ಮಾಡಿಕೊಂಡು, "ಮೌಲ್ಯಗಳಿಗೆ ಬೆಲೆಯಿಲ್ಲ" ಎಂದು ಮುಸುಕಿನಲ್ಲಿ ನಗುವ ಮಹಾಶಯರುಗಳಿಗೆ ಅವರ ಭವಿಷ್ಯದಲ್ಲಿ ಒಂದಲ್ಲ ಒಂದು ದಿನ "ಹತ್ತು ದಿನ ಕದ್ದವನು ಒಂದು ದಿನ ಸಿಕ್ಕಿಕೊಳ್ಳುತ್ತಾನೆ" ಎಂಬ ಜನಸಾಮಾನ್ಯ ನಾಣ್ಣುಡಿಯು ಅವರ ಸ್ವಂತ ಜೀವನದಲ್ಲಿ ಅನುಭವಕ್ಕೆ ಬರುತ್ತದೆ. ಹಾಗೆ ಬಂದಾಗ, ಅವರ ಮೋರೆಗೆ ಅಂಟಿದ ಕಪ್ಪು ಕಲೆ ಕೊನೆಯವರೆಗೂ ಅಳಿಸಲಾರದಷ್ಟು ದಟ್ಟವಾಗಿರುತ್ತದೆ. ಅಡಿಕೆಗೆ ಹೋದ ಮಾನವನ್ನು ಅವರು ಮತ್ತೆಂದೂ ಆನೆ ಕೊಟ್ಟೂ ಪಡೆಯಲಾರರು!

ಹೀಗೆ ನಾವು ಒಂದೊಂದೇ ಮೌಲ್ಯಗಳನ್ನು ಪರಿಶೀಲಿಸುತ್ತಾ ಹೋದಂತೆ, ಅವುಗಳಲ್ಲಿ ಒಂದೊಂದರ ಮಹತ್ವ ಹಾಗೂ ಅನಿವಾರ್ಯತೆಗಳು ನೋಡಸಿಗುತ್ತವೆ. ಹೀಗಾಗಿ ಬಾಳಿನಲ್ಲಿ ಮೌಲ್ಯಗಳು ಮಾನವ ಸಮಾಜ ರೂಢಿಸಿಕೊಳ್ಳಲೇಬೇಕಾದ ವೈಜ್ಞಾನಿಕ ಸತ್ಯಗಳ ಗುಂಪಿಗೇ ಸೇರುತ್ತವೆ.

ಮೌಲ್ಯಗಳನ್ನು ಅಳವಡಿಸಿಕೊಳ್ಳುವುದೆಂದರೆ, ಮನುಷ್ಯ ಜೀವನದಲ್ಲಿ ಆಸಕ್ತಿ ಕಳೆದುಕೊಂಡು ಅಳುಮೋರೆ ಹಾಕಿಕೊಂಡಿರಬೇಕೆಂದು ಅರ್ಥವಲ್ಲ. ಸಂಸ್ಕೃತದ ಶ್ಲೋಕವೊಂದು ತಿಳಿಸುವಂತೆ —**ನ ಪ್ರಾಪ್ನುವಂತಿ ಮುನಯೋ ರುದಿತೇನ ಮೋಕ್ಷಂ । ಸ್ವರ್ಗಾಯತಂ ನ ಪರಿಹಾಸಕಥಾ ಖುಣದ್ಧಿ**—ಅಂದರೆ ಜೀವನದಲ್ಲಿ ಜುಗುಪ್ಸೆ, ನಿರಾಸಕ್ತಿಯನ್ನು ಬೆಳೆಸಿಕೊಂಡ ಮಾತ್ರಕ್ಕೆ ಮೋಕ್ಷ ಲಭ್ಯವಾಗಬೇಕೆಂದೇನಿಲ್ಲ. ಹಾಗೆಯೇ ಜೀವನದಲ್ಲಿ ಆಸಕ್ತಿ ಹೊಂದಿದ್ದು ಉಲ್ಲಾಸ ಮತ್ತು ಸಂತೋಷಗಳಿಂದ ಕೂಡಿದ್ದರೆ, ಸ್ವರ್ಗ ಕೈಗೆ ಎಟುಕಲಾರದು ಎಂದೂ ಇಲ್ಲ.

ವಿವೇಕಿಯಾದವನು ಉಚಿತಾನುಚಿತಗಳನ್ನು ಯೋಚಿಸಿ, ತನ್ನ ಹಾಗೂ ತನ್ನ ಸಮಾಜದ ಪ್ರಗತಿಗೆ, ಶಾಂತಿಗೆ ಬೇಕಾದ ಮಧ್ಯಮ ಮಾರ್ಗ ಹಿಡಿಯುತ್ತಾನೆ. ಬಾಳು ಸಾಗಿಸುವ ಈ ಕಲೆಯನ್ನು ಸಾಧಿಸುವ ತಂತ್ರಗಳನ್ನು ಮಾನ್ಯ ಡಿ.ವಿ.ಜಿ.ಯವರು ತಮ್ಮ 'ಮಂಕುತಿಮ್ಮನ ಕಗ್ಗ' ಕೃತಿಯಲ್ಲಿ ಹೀಗೆ ಹೇಳಿಕೊಟ್ಟಿದ್ದಾರೆ:

**ಒಮ್ಮೆ ಹೂದೋಟದಲಿ, ಒಮ್ಮೆ ಕೆಳೆಕೂಟದಲಿ ।**
**ಒಮ್ಮೆ ಸಂಗೀತದಲಿ, ಒಮ್ಮೆ ಶಾಸ್ತ್ರದಲಿ ॥**
**ಒಮ್ಮೆ ಸಂಸಾರದಲಿ, ಮತ್ತೊಮ್ಮೆ ಮೌನದಲಿ ।**
**ಬ್ರಹ್ಮಾನುಭವಿಯಾಗೋ—ಮಂಕುತಿಮ್ಮ ॥**

ಅವರ ಈ ಕಿವಿಮಾತನ್ನು ಅನುಸರಿಸಿ ವಿವೇಕಿಯಾದವನು, ನಿಪುಣ ಕಲಾಕಾರನೊಬ್ಬ ತನ್ನ ಚಿತ್ರದಲ್ಲಿ ಇತಿ ಮಿತಿ ಅರಿತು ವರ್ಣಗಳನ್ನು ಬಳಸಿ ಸಾಮರಸ್ಯ ತಂದು ಚಿತ್ರವನ್ನು ಸುಂದರವಾಗಿ ಸೃಷ್ಟಿಸುವಂತೆ, "ರಸವೇ ಜನನ, ವಿರಸ ಮರಣ, ಸಮರಸವೇ ಜೀವನ" ಎಂದು, ತನ್ನ ಬಾಳಿನಲ್ಲಿ ಮೌಲ್ಯಗಳ ಸಹಾಯದಿಂದ ಸಮರಸದ ಕಲೆಯನ್ನು ಬಳಸಿ ನಡೆಯುತ್ತಾನೆ. ನಡೆದು ತನ್ನ ದಾರಿಯಲ್ಲಿ ಹಾಗೂ ತನ್ನೊಡನೆ ನಡೆಯುವರ ಹಾದಿಯಲ್ಲಿ ಸುಖ ನಲಿವಿನ ಮಲ್ಲಿಗೆ ಚೆಲ್ಲುತ್ತಾನೆ.

ರಾಷ್ಟ್ರಶಾಂತಿ, ವಿಶ್ವಶಾಂತಿಗಳ ಪ್ರಶ್ನೆ ಬಂದಾಗ, ಇಡೀ ಮಾನವ ಜನಾಂಗ ಈ ಮೌಲ್ಯಗಳನ್ನು ನೆಚ್ಚಿ, ಆದರಿಸಿ ನಡೆಯುವುದು ಆವಶ್ಯಕ. ಏಕೆಂದರೆ ಮೌಲ್ಯಗಳಿಗೆ ಬೆಲೆಕೊಡದ ಸಮಾಜದಲ್ಲಿ, ಬೆರಳೆಣಿಸುವಷ್ಟು ಜನ ಮೌಲ್ಯಗಳನ್ನಾಧರಿಸಿ ಜೀವನ ನಡೆಸುತ್ತಿದ್ದರೆ, ಅನೇಕ ಬಾರಿ ಅವರು ಇತರರ ದೌರ್ಜನ್ಯ ದಬ್ಬಾಳಿಕೆಗೆ ಒಳಗಾಗಿ "ಸತ್ಯಕ್ಕೆ ಸ್ಥಾನವಿಲ್ಲ" ಎಂದು ನೊಂದುಕೊಳ್ಳುವಂತಾಗುತ್ತದೆ. ಇಂದಿನ ದಿನಗಳಲ್ಲಿ ಆಗುತ್ತಿರುವುದಾದರೂ ಇದೇ!!

ಮೌಲ್ಯಗಳು ಮಾನವ ಸಮಾಜದ ನೆಮ್ಮದಿ ಶಾಂತಿಗಳನ್ನು ಕಾಪಾಡುವ ರಕ್ಷಾಬಂಧನಗಳು. ಸಾಮೂಹಿಕವಾಗಿ ಇವುಗಳನ್ನು ಬಳಸಿದಾಗ ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಸುಖ, ಸಮಾಧಾನಗಳನ್ನು ಪಡೆಯುವುದು ಸಾಧ್ಯವಾಗುತ್ತದೆ. ಅವುಗಳನ್ನು ತೊರೆದ ಯಾವ ವ್ಯಕ್ತಿಯೇ ಆಗಲಿ, ಸಮಾಜವೇ ಆಗಲಿ ಪ್ರಗತಿಯ ಹಾದಿಯತ್ತ ಹೆಜ್ಜೆ ಹಾಕುವುದು ಸಾಧ್ಯವಿಲ್ಲ. ಹೊರಗಿನ ಬಾಹ್ಯಾಡಂಬರದ ಹೊಳಪನ್ನು ಬೆಳಕು ಎಂದು ಭ್ರಮಿಸಿ ಕಣ್ಣುಮುಚ್ಚಿ ಕುಳಿತಿರುವ ಜನ ನಿಜವಾದ ಬೆಳಕನ್ನು ಹುಡುಕಲು ಎದ್ದು ನಿಲ್ಲಬೇಕು. ಒಬ್ಬೊಬ್ಬರ ಕಿವಿಯಲ್ಲೂ ಪೂಜ್ಯ ವಿವೇಕಾನಂದರು ತಮ್ಮ ಸಿಂಹವಾಣಿಯಲ್ಲಿ ಕರೆ ಕೊಟ್ಟ "ಏಳಿ, ಎದ್ದೇಳಿ, ಗುರಿ ಸಾಧಿಸುವವರೆಗೆ ನಿಲ್ಲಬೇಡಿ" ಎಂಬ ಮಾತುಗಳು ಮೊಳಗಿ ಪ್ರತಿಧ್ವನಿಸಬೇಕು. ಕೇವಲ ಪ್ರತಿಧ್ವನಿಸಿದರೆ ಸಾಲದು, ಕಾರ್ಯಗತವಾಗಬೇಕು. ನೆಮ್ಮದಿಯ ಶಾಂತಿಯ ಮಂತ್ರ ಅಲೆಅಲೆಯಾಗಿ ತೇಲುತ್ತಾ ಎಲ್ಲರ ಹೃದಯಗಳನ್ನು ಕಟ್ಟಿ ತಾನು ಅಲ್ಲಿ ನೆಲೆಗೊಳ್ಳಬೇಕು. ಹಾಗಾದಾಗ ಮಾತ್ರ ವಿಜ್ಞಾನದ ಆವಿಷ್ಕಾರಗಳಿಗೆ ಗೆಲುವು. ಹಾಗೂ ಮಾನವ ಜೀವನ ಸಾರ್ಥಕ, ಅರ್ಥಪೂರ್ಣ ಎನಿಸುತ್ತದೆ. ◆